# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 630 (474) |
| ಉತ್ತರಿಸಬೇಕಾದ ದಿನಾಂಕ | : | 11.12.2025 |
| ಸದಸ್ಯರ ಹೆಸರು | : | ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು ) |
| ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದ ಜನಪ್ರಿಯ ಕ್ರೀಡೆಯಾದ ಕುಸ್ತಿಗೆ ಬೆಂಬಲವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ರಾಜ್ಯದ ಜನಪ್ರಿಯ ಕ್ರೀಡೆಯಾದ ಕುಸ್ತಿ ಕ್ರೀಡೆಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಗಣನೀಯ ಪ್ರೋತ್ಸಾಹ/ ಬೆಂಬಲವನ್ನು ನೀಡಲಾಗುತ್ತಿದೆ.</td></tr>
<tr><td>ಆ</td><td>ಬಂದಿದಲ್ಲಿ, ಕುಸ್ತಿ ತರಬೇತುದಾರರು ಮತ್ತು ಕುಸ್ತಿ ತರಬೇತಿ ಕೇಂದ್ರಗಳಿಲ್ಲದಿರುವುದನ್ನು ಸರ್ಕಾರ ಗಮನಿಸಿದೆಯೇ;</td><td>ರಾಜ್ಯದಲ್ಲಿ ಕುಸ್ತಿ ಕ್ರೀಡೆಯ ಅಭಿವೃದ್ಧಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಕೆಳಕಂಡಂತೆ ಕ್ರಮ ಕೈಗೊಳ್ಳಲಾಗುತ್ತಿದೆ:<br>1. ಕ್ರೀಡಾ ವಸತಿ ನಿಲಯಗಳು: ರಾಜ್ಯದ 07 ಕ್ರೀಡಾ ವಸತಿ ನಿಲಯಗಳಲ್ಲಿ ಕುಸ್ತಿ ಕ್ರೀಡಾ ವಿಭಾಗಗಳನ್ನು ಆರಂಭಿಸಲಾಗಿದ್ದು, 315 ಕುಸ್ತಿ ಕ್ರೀಡಾಪಟುಗಳಿಗೆ ಉಚಿತ ಊಟೋಪಹಾರ, ವಸತಿ, ಕ್ರೀಡಾ ಕಿಟ್ ಹಾಗೂ ನುರಿತ ತರಬೇತುದಾರರಿಂದ ವೈಜ್ಞಾನಿಕ ಕ್ರೀಡಾ ತರಬೇತಿ ನೀಡಲಾಗುತ್ತಿದೆ.<br>
<table>
<tr><th>ಕ್ರಸ</th><th>ಕ್ರೀಡಾ ವಸತಿ ನಿಲಯದ ಹೆಸರು</th><th>ಕುಸ್ತಿ ಕ್ರೀಡಾಪಟುಗಳ ಸಂಖ್ಯೆ</th></tr>
<tr><td>1</td><td>ಜಿಲ್ಲಾ ಕ್ರೀಡಾ ವಸತಿ ನಿಲಯ, ಬೆಳಗಾವಿ</td><td>46</td></tr>
<tr><td>2</td><td>ಜಿಲ್ಲಾ ಕ್ರೀಡಾ ವಸತಿ ನಿಲಯ, ದಾವಣಗೆರೆ</td><td>54</td></tr>
<tr><td>3</td><td>ಜಿಲ್ಲಾ ಕ್ರೀಡಾ ವಸತಿ ನಿಲಯ, ಬಾಗಲಕೋಟೆ</td><td>42</td></tr>
<tr><td>4</td><td>ಕ್ರೀಡಾ ವಸತಿ ನಿಲಯ, ಹಳಿಯಾಳ</td><td>89</td></tr>
<tr><td>5</td><td>ಜಿಲ್ಲಾ ಕ್ರೀಡಾ ವಸತಿ ನಿಲಯ, ಧಾರವಾಡ</td><td>29</td></tr>
<tr><td>6</td><td>ಜಿಲ್ಲಾ ಕ್ರೀಡಾ ವಸತಿ ನಿಲಯ, ಗದಗ</td><td>28</td></tr>
<tr><td>7</td><td>ಜಿಲ್ಲಾ ಕ್ರೀಡಾ ವಸತಿ ನಿಲಯ, ಶಿವಮೊಗ್ಗ</td><td>27</td></tr>
<tr><td></td><td>ಒಟ್ಟು</td><td>315</td></tr>
</table>
2. ಕುಸ್ತಿ ಸ್ಪರ್ಧೆಗಳ ಆಯೋಜನೆ: ಪ್ರತಿ ವರ್ಷ ಕೆಳಕಾಣಿಸಿದ ರಾಜ್ಯ ಮಟ್ಟದ ಕ್ರೀಡಾಕೂಟಗಳನ್ನು ಆಯೋಜಿಸಲಾಗುತ್ತಿದ್ದು, ಅವುಗಳಲ್ಲಿ ಕುಸ್ತಿ ಸ್ಪರ್ಧೆಗಳನ್ನು ಸಹ ಆಯೋಜಿಸುವ ಮೂಲಕ ಕುಸ್ತಿ ಕ್ರೀಡಾಪಟುಗಳಿಗೆ ಸ್ಪರ್ಧಾ ಅವಕಾಶವನ್ನು ಕಲ್ಪಿಸಲಾಗುತ್ತಿದೆ. ಈ ಕ್ರೀಡಾಕೂಟಗಳಲ್ಲಿ ಭಾಗವಹಿಸುವವರಿಗೆ ಉಚಿತ ಊಟೋಪಹಾರ, ವಸತಿ ಹಾಗೂ ಕ್ರೀಡಾ ಕಿಟ್ ನೀಡಲಾಗುತ್ತಿದೆ.<br>ಅ. ದಸರಾ ಕ್ರೀಡಾಕೂಟ ಸಿ.ಎಂ. ಕಪ್<br>ಆ. ಮಿನಿ ಕರ್ನಾಟಕ ಕ್ರೀಡಾಕೂಟ<br>ಇ. ಕರ್ನಾಟಕ ಕ್ರೀಡಾಕೂಟ</td></tr>
</table>

<table>
<tr>
<td></td>
<td></td>
<td>
<ol start="3">
<li>ಆಧುನಿಕ ಕುಸ್ತಿ ಮ್ಯಾಟ್ ಸೌಲಭ್ಯ: ಕುಸ್ತಿ ಕ್ರೀಡೆ ಜನಪ್ರಿಯವಾಗಿರುವ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಆಧುನಿಕ ಕುಸ್ತಿ ಮ್ಯಾಟ್‌ಗಳನ್ನು ಒದಗಿಸಲಾಗುತ್ತಿದೆ.</li>
<li>ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ: ಪಾರಂಪರಿಕ ಹಾಗೂ ಗ್ರಾಮೀಣ ಕ್ರೀಡೆಗಳಲ್ಲಿ ಗಣನೀಯ ಕೊಡುಗೆ ನೀಡಿದ ಕ್ರೀಡಾಪಟುಗಳಿಗೆ ಕರ್ನಾಟಕ ಕ್ರೀಡಾ ರತ್ನ ವಾರ್ಷಿಕ ಪ್ರಶಸ್ತಿ ನೀಡಲಾಗುತ್ತಿದ್ದು, ಪಾರಂಪರಿಕ ಮಣ್ಣಿನ ಕುಸ್ತಿ ಕ್ರೀಡಾಪಟುಗಳಿಗೆ ಪ್ರಶಸ್ತಿ ನೀಡಲಾಗುತ್ತಿದೆ.</li>
<li>ಮಾಸಾಶನ: 50 ವರ್ಷ ವಯೋಮಾನ ಮೀರಿದ ಕಷ್ಟ ಪರಿಸ್ಥಿತಿಯಲ್ಲಿರುವ ಮಾಜಿ ಕ್ರೀಡಾಪಟುಗಳಿಗೆ ಕೆಳಕಂಡಂತೆ ಮಾಸಾಶನವನ್ನು ನೀಡಲಾಗುತ್ತಿದೆ.</li>
</ol>
<table>
<tr><th>ವಿವರ</th><th>ಮಾಸಾಶನದ ಮೊತ್ತ</th></tr>
<tr><td>ರಾಜ್ಯ ಮಟ್ಟ</td><td>ರೂ 4,500</td></tr>
<tr><td>ರಾಷ್ಟ್ರಮಟ್ಟ</td><td>ರೂ 5,000</td></tr>
<tr><td>ಅಂತರ-ರಾಷ್ಟ್ರೀಯ ಮಟ್ಟ</td><td>ರೂ 6,000</td></tr>
</table>
ಕುಸ್ತಿ ಕ್ರೀಡಾಪಟುಗಳಿಗೆ ನೀಡಲಾಗುತ್ತಿರುವ ಇತರೆ ಸೌಲಭ್ಯಗಳು: ಕುಸ್ತಿ ಕ್ರೀಡಾಪಟುಗಳೂ ಸೇರಿದಂತೆ ರಾಜ್ಯದ ಕ್ರೀಡಾಪಟುಗಳಿಗೆ ಉತ್ತೇಜನ ನೀಡಲು ವಿವಿಧ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ. ವಿವರ ಅನುಬಂಧದಲ್ಲಿ ಒದಗಿಸಿದೆ.
</td>
</tr>
<tr>
<td>ಇ</td>
<td>ಗಮನಿಸಿದ್ದಲ್ಲಿ, ಕುಸ್ತಿ ತರಬೇತುದಾರರನ್ನು ನೇಮಕ ಮಾಡುವುದು ಮತ್ತು ತರಬೇತಿ ಕೇಂದ್ರಗಳನ್ನು ತೆರೆಯುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?</td>
<td>ರಾಜ್ಯದ ವಿವಿಧ ಭಾಗಗಳ 07 ಕ್ರೀಡಾ ವಸತಿ ನಿಲಯಗಳಲ್ಲಿ ಕುಸ್ತಿ ಕ್ರೀಡಾ ತರಬೇತಿ ನೀಡಲಾಗುತ್ತಿದ್ದು, ಪರಿಣತ ತರಬೇತುದಾರರ ಸೇವೆ ಒದಗಿಸಲಾಗಿದೆ.</td>
</tr>
</table>

**ವೈಎಸ್‌ಡಿ-ಸಿಡಿಎನ್/516/2025**

**(ಸಿದ್ದರಾಮಯ್ಯ)**

ಮುಖ್ಯಮಂತ್ರಿ

# <u>ಅನುಬಂಧ</u>

## <u>ಕುಸ್ತಿ ಕ್ರೀಡಾಪಟುಗಳು ಸೇರಿದಂತೆ ಕ್ರೀಡಾಪಟುಗಳಿಗಾಗಿ ಇರುವ ಪ್ರಮುಖ ಕಾರ್ಯಕ್ರಮಗಳು</u>

1. **'ಗುರಿ: ಒಲಿಂಪಿಕ್ ಪದಕ' ಯೋಜನೆ**

ರಾಜ್ಯದ ಅತ್ಯಂತ ಪ್ರತಿಭಾನ್ವಿತ 60 ಕ್ರೀಡಾಪಟುಗಳನ್ನು ಗುರುತಿಸಿ, 2028 ರ ಒಲಿಂಪಿಕ್ಸ್ ತಯಾರಿಗೆ ವಾರ್ಷಿಕ ತಲಾ ರೂ 10.00 ಲಕ್ಷ ಪ್ರೋತ್ಸಾಹ ಧನ ನೀಡಲಾಗುವುದು. ಕರ್ನಾಟಕದ ಕ್ರೀಡಾಪಟುಗಳು ಈಗಾಗಲೇ ದಾಖಲಿಸಿರುವ ಕ್ರೀಡಾ ಸಾಧನೆಗಳನ್ನು ಆಧರಿಸಿ ಆಯ್ಕೆ ಮಾಡಲಾಗುವುದು.

2. **ಕ್ರೀಡಾ ಸಾಧಕರಿಗೆ ನಗದು ಪುರಸ್ಕಾರ:**

ರಾಷ್ಟ್ರೀಯ ಮತ್ತು ಅಂತರ-ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಕ್ರೀಡಾಪಟುಗಳಿಗೆ ಕೆಳಕಾಣಿಸಿದಂತೆ ನಗದು ಪುರಸ್ಕಾರವನ್ನು ನೀಡಲಾಗುತ್ತಿದೆ.

| ಕ್ರ.ಸ | ವಿವರ | ಚಿನ್ನದ ಪದಕ | ಬೆಳ್ಳಿಯ ಪದಕ | ಕಂಚಿನ ಪದಕ |
|---|---|---|---|---|
| 1 | ಒಲಂಪಿಕ್ಸ್ | 6.00 ಕೋಟಿ | 4.00 ಕೋಟಿ | 3.00 ಕೋಟಿ |
| 2 | ಏಷಿಯನ್ ಗೇಮ್ಸ್ | 35.00 ಲಕ್ಷ | 25.00 ಲಕ್ಷ | 15.00 ಲಕ್ಷ |
| 3 | ಕಾಮನ್‌ವೆಲ್ತ್ ಗೇಮ್ಸ್ | 35.00 ಲಕ್ಷ | 25.00 ಲಕ್ಷ | 15.00 ಲಕ್ಷ |
| 4 | ವಿಶ್ವ ಕಪ್/ಚಾಂಪಿಯನ್ ಶಿಪ್ | 5.00 ಲಕ್ಷ | 3.00 ಲಕ್ಷ | 2.00 ಲಕ್ಷ |
| 5 | ನ್ಯಾಷನಲ್ ಗೇಮ್ಸ್ | 5.00 ಲಕ್ಷ | 3.00 ಲಕ್ಷ | 2.00 ಲಕ್ಷ |
| 6 | ನ್ಯಾಷನಲ್ ಚಾಂಪಿಯನ್ ಶಿಪ್ (ಒಲಂಪಿಕ್ ಕ್ರೀಡೆಗಳಿಗೆ) | 2.00 ಲಕ್ಷ | 1.00 ಲಕ್ಷ | 50,000 |
| 7 | ಜೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳಿಗೆ) | 50,000 | 25,000 | 15,000 |
| 8 | ಸಬ್ ಜೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳಿಗೆ) | 25,000 | 15,000 | 10,000 |

3. **ಪರಿಶಿಷ್ಟ ಜಾತಿ ಮತ್ತು ಪಂಗಡದ ಸಾಧಕ ಕ್ರೀಡಾಪಟುಗಳಿಗೆ ವಿಶೇಷ ನಗದು ಪುರಸ್ಕಾರ:**

ಅಂತರ-ರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಕ್ರೀಡಾಕೂಟಗಳ ಪದಕ ವಿಜೇತರಿಗೆ ವಿಶೇಷ ನಗದು ಪುರಸ್ಕಾರ ನೀಡಲಾಗುತ್ತಿದೆ.

4. **ಕ್ರೀಡಾ ವಿದ್ಯಾರ್ಥಿ ವೇತನ:**

ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಪದಕ ವಿಜೇತರಾದ ಹಾಗೂ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರೂ 10,000 ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

5. **ಶೈಕ್ಷಣಿಕ ಶುಲ್ಕ ಮರುಪಾವತಿ:**

ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದಿಂದ ಪ್ರತಿನಿಧಿಸಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ವಾರ್ಷಿಕ ಗರಿಷ್ಟ ರೂ 50,000/- ವರೆಗೆ ಶೈಕ್ಷಣಿಕ ಶುಲ್ಕ ಮರುಪಾವತಿ ಮಾಡಲಾಗುತ್ತಿದೆ.

6. **ಕ್ರೀಡಾ ಪ್ರಶಸ್ತಿಗಳು:**

- **ಏಕಲವ್ಯ ಪ್ರಶಸ್ತಿ:** ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಸಾಧನೆ ಮಾಡಿದ 15 ಕ್ರೀಡಾಪಟುಗಳಿಗೆ ಪ್ರಶಸ್ತಿ ವರ್ಷ ಸೇರಿದಂತೆ ಕಳೆದ 05 ವರ್ಷಗಳ ಕ್ರೀಡಾ ಸಾಧನೆ ಆಧರಿಸಿ, ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತಿದೆ. ಆಯ್ಕೆಗೊಂಡವರಿಗೆ ತಲಾ ರೂ 4.00 ಲಕ್ಷ ನಗದು ಪುರಸ್ಕಾರ ಒಳಗೊಂಡ ರಾಜ್ಯದ ಅತ್ಯುನ್ನತ ಕ್ರೀಡಾ ಪ್ರಶಸ್ತಿಯಾದ ಏಕಲವ್ಯ ಪ್ರಶಸ್ತಿ ನೀಡಲಾಗುತ್ತಿದೆ.
- **ಜೀವಮಾನ ಸಾಧನೆ ಪ್ರಶಸ್ತಿ:** ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ತರಬೇತಿ ನೀಡಿದ ರಾಜ್ಯದ ತರಬೇತುದಾರರಿಗೆ ತಲಾ ರೂ 3.00 ಲಕ್ಷ ನಗದು ಪುರಸ್ಕಾರ ಒಳಗೊಂಡ ಜೀವಮಾನ ಸಾಧನೆ ಪ್ರಶಸ್ತಿಯನ್ನು ಪ್ರತಿ ವರ್ಷ ನೀಡಲಾಗುತ್ತಿದೆ.
- **ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ:-** ಗ್ರಾಮೀಣ ಮತ್ತು ಪಾರಂಪರಿಕ ಕ್ರೀಡೆಗಳಲ್ಲಿ ವಿಶೇಷ ಸಾಧನೆ ಮಾಡಿದ ರಾಜ್ಯದ ಗ್ರಾಮೀಣ ಕ್ರೀಡಾಪಟುಗಳಿಗೆ ತಲಾ ರೂ 2.00 ಲಕ್ಷ ನಗದು ಪುರಸ್ಕಾರ ಒಳಗೊಂಡ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.
- **ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ:** ಕ್ರೀಡೆಯ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿದ ಖಾಸಗಿ ಸಂಘ-ಸಂಸ್ಥೆಗಳಿಗೆ ಉತ್ತೇಜನ ನೀಡಲು ತಲಾ ರೂ 10.00 ಲಕ್ಷ ನಗದು ಪುರಸ್ಕಾರ ಒಳಗೊಂಡ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಯನ್ನು ಪ್ರತಿ ವರ್ಷ ನೀಡಲಾಗುತ್ತಿದೆ.

7. **ನಮ್ಮೂರ ಶಾಲೆಗೆ ನಮ್ಮ ಯುವಜನರು:**

ಅಧಿಕೃತ ಕ್ರೀಡಾಕೂಟಗಳಲ್ಲಿ ಉತ್ತಮ ಸಾಧನೆ ತೋರುವ ಕ್ರೀಡಾಪಟುಗಳನ್ನು ರೂಪಿಸುವ ಸರ್ಕಾರಿ ಶಾಲೆಗಳನ್ನು ಪ್ರತಿ ಜಿಲ್ಲೆಗೆ ಒಂದರಂತೆ ಗುರುತಿಸಿ ಆಯ್ಕೆಯಾದ ಶಾಲೆಗೆ ಪ್ರೋತ್ಸಾಹವಾಗಿ ತಲಾ ರೂ 1.00 ಲಕ್ಷದಂತೆ ಸರ್ಕಾರದಿಂದ ಪ್ರೋತ್ಸಾಹಧನವನ್ನು ನೀಡಲಾಗುವುದು.

8. **ಸಾಧಕ ಕ್ರೀಡಾಪಟುಗಳಿಗೆ ಉದ್ಯೋಗಾವಕಾಶ:**

- ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್ ಪದಕ ವಿಜೇತರಿಗೆ ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಗುಂಪು-ಎ ಹುದ್ದೆ ಮತ್ತು ಏಷಿಯನ್ ಗೇಮ್ಸ್, ಪ್ಯಾರಾ ಏಷಿಯನ್ ಗೇಮ್ಸ್, ಕಾಮನ್‌ವೆಲ್ತ್ ಗೇಮ್ಸ್‌ಗಳಲ್ಲಿ ಪದಕ ವಿಜೇತ ಕ್ರೀಡಾಪಟುಗಳಿಗೆ ರಾಜ್ಯ ಸರ್ಕಾರದ ಇಲಾಖೆಗಳಲ್ಲಿ, ಗುಂಪು-ಬಿ ಮತ್ತು ಇತರೆ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲಾಗುತ್ತಿದೆ.

- ಪೊಲೀಸ್ ಇಲಾಖೆಯಲ್ಲಿ ಕ್ರೀಡಾ ಸಾಧಕರಿಗೆ 3% ಮೀಸಲಾತಿ ಜಾರಿಗೊಳಿಸಲಾಗಿದೆ ಹಾಗೂ ಅರಣ್ಯ ಇಲಾಖೆಯಲ್ಲಿ 3% ಮೀಸಲಾತಿ ಹಾಗೂ ರಾಜ್ಯದ ಎಲ್ಲಾ ನೇರ ನೇಮಕಾತಿಯಲ್ಲಿ 2% ಕ್ರೀಡಾ ಮೀಸಲಾತಿ ನೀಡುವ ಕುರಿತು ನಿಯಮಗಳನ್ನು ರೂಪಿಸಲಾಗುತ್ತಿದೆ.